**CC 2526/2019**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 2526/2019**

**ಪಿ ಡಬ್ಲ್ಯೂ - 2**

**ಸಾಕ್ಷಿಯ ಹೆಸರು - ಯೋಗಾನಂದ ಆರ್**
**ತಂದೆಯ ಹೆಸರು - ರಾಮಣ್ಣ**
**ವಯಸ್ಸು - 48 ವರ್ಷಗಳು**
**ಉದ್ಯೋಗ - ಆಯುಕ್ತರು, ಹೂಡಾ ಕಚೇರಿ, ಹೊಸಪೇಟೆ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 02-08-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಹೆಚ್ ಆರ್., ವಕೀಲರಿಂದ**

ನಾನು ದಿಃ **17-04-2025** ರಿಂದ ಹೊಸಪೇಟೆಯ ನಗರಾಭಿವೃದ್ಧಿ ಕಚೇರಿಯಲ್ಲಿ ಆಯುಕ್ತನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಪ್ರಕರಣದಲ್ಲಿ ನ್ಯಾಯಾಲಯ ನೀಡಿದ್ದ ಸಮನ್ಸ್ ಗೆ ಸಂಬಂಧಿಸಿ ಈ ದಿನ **4** ದಾಖಲೆಗಳ ದೃಡೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ದಿಃ **29-06-2012** ಮತ್ತು **25-09-2013** ರ ನೋಟಿಸ್ ಗಳ ನಕಲುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಪಿರ್ಯಾದುದಾರರ ಪರ ನಿಪಿಃ **10** ಮತ್ತು **11** ಎಂದು ಗುರುತಿಸಲಾಯಿತು. ಪ್ರಕರಣದಲ್ಲಿನ ವಿವಾದಿತ ಆಸ್ತಿಗೆ ಸಂಬಂಧಿಸಿದ ಪಂಚನಾಮೆ ಕಾಲಕ್ಕೆ ಮಾಡಿಕೊಂಡ ಹೇಳಿಕೆ ಮತ್ತು ನಕ್ಷೆ ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿಃ **12** ಮತ್ತು **13** ಎಂದು ಗುರುತಿಸಲಾಯಿತು.

ಪ್ರಕರಣದಲ್ಲಿನ ವಿವಾದಿತ ಸ್ವತ್ತಿನ ಕಡತವನ್ನು ಪರಿಶೀಲಿಸಿ ನೋಡಲಾಗಿ ಅಲ್ಲಿರುವ ಕಟ್ಟಡ ಸರ್ಕಾರದ ಜಮೀನಿನಲ್ಲಿ ಇರುತ್ತದೆ ಎಂದು ತಿಳಿದು ಬಂದಿತ್ತು. ಸದರಿ ಕಟ್ಟಡ ನಿಪಿಃ **13** ರಲ್ಲಿ ಪೂರ್ವ-ಪಶ್ಚಿಮ **20** ಅಡಿ ಮತ್ತು ಉತ್ತರ-ದಕ್ಷಿಣ **30** ಅಡಿ ಜಾಗವನ್ನು ಗುರುತಿಸಿದ್ದು, ಅದು ಒತ್ತುವರಿ ಜಾಗ ಆಗಿರುತ್ತದೆ.

ನಿಪಿಃ **6** ರ ದಾಖಲೆ ಈ ಹಿಂದೆ ನಮ್ಮ ವಿರುದ್ದ ದಾಖಲಿಸಿದ್ದ ದಾವೆಗೆ ಸಂಬಂಧಿಸಿದ್ದು. ಸದರಿ ಪ್ರಕರಣದಲ್ಲಿ ವಿವಾದಿತ ಸ್ವತ್ತು ನಮ್ಮದು ಎಂದು ತೀರ್ಪು ಬಂದಿರುತ್ತದೆ. ಸದರಿ ತೀರ್ಪಿನ ವಿರುದ್ದ ದಾಖಲಿಸಿದ ಮೇಲ್ಮನವಿ ವಜಾ ಆಗಿರುತ್ತದೆ. ಸದರಿ ದಾಖಲೆ ನ್ಯಾಯಾಲಯದ ಮುಂದೆ ಪಿರ್ಯಾದುದಾರರು ಹಾಜರುಪಡಿಸಿರುತ್ತಾರೆ. ವಿವಾದಿತ ಸ್ವತ್ತು ಅಂದರೆ ಕಟ್ಟಡ ಸರ್ಕಾರದ ಜಮೀನಿನಲ್ಲಿ ಅಂದರೆ ನಮ್ಮ ಜಮೀನಿನಲ್ಲಿಯೇ ಇರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ವಾಯ್., ವಕೀಲರಿಂದ</u>**

ನಗರಸಭೆಯಲ್ಲಿ ವಿವಾದಿತ ಸ್ವತ್ತು ನಮ್ಮದು ಎಂದು ವರದಿ ನೀಡಿ ಖಾತೆಯನ್ನು ನಮ್ಮ ಹೆಸರಿಗೆ ಮಾಡಿಕೊಂಡಿರುವುದಿಲ್ಲ. ಸದರಿ ಜಾಗದಲ್ಲಿ ಸ್ವತ್ತು ನಗರಾಭಿವೃದ್ದಿ ಪ್ರಾಧಿಕಾರಕ್ಕೆ ಸಂಬಂಧಿಸಿದ್ದು ಎಂದು ಯಾವುದೇ ಫಲಕವನ್ನು ನೆಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ಆ ಬಗ್ಗೆ ನೋಟಿಫಿಕೇಷನ್ ಆಗಿದೆ ಎಂದು ನುಡಿಯುತ್ತಾರೆ. ಸದರಿ ನೋಟಿಫಿಕೇಷನ್ ದಾಖಲೆಯನ್ನು ಹಾಜರುಪಡಿಸಿರುತ್ತೇವೆ. ಆ ರೀತಿಯ ಯಾವುದೇ ನೋಟಿಫಿಕೆಷನ್ ಇರುವುದಿಲ್ಲ ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

ಜಾಗ ನಮ್ಮದು ಎಂದು ತಿಳಿದ ತಕ್ಷಣ ನಗರಸಭೆಯಲ್ಲಿ ಖಾತೆ ಮಾಡಿಸಿಕೊಂಡವರಿಂದ ಪಿರ್ಯಾದುದಾರರವರೆಗೆ ಯಾರೆಲ್ಲಾ ಮಾಲೀಕರಿದ್ದರು ಅವರಿಗೆ ನೋಟಿಸ್ ನೀಡಿರುತ್ತೇವೆ. ಸದರಿ ನೋಟಿಸ್ ಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಅಂತಹ ನೋಟಿಸ್ ಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

CC 2526/2019

**ಪಿ ಡಬ್ಲೂ - 2**

ನಗರಸಭೆಗೆ ಕೋರಿಕೆ ಸಲ್ಲಿಸಿ ವಿವಾದಿತ ಸ್ವತ್ತು ಯಾರ ಹೆಸರಿಗೆ ಮತ್ತು ಯಾವ ದಾಖಲೆಯ ಆಧಾರದ ಮೇಲೆ ನಗರಸಭೆಯಲ್ಲಿ ಖಾತೆ ಆಗಿದೆ ಎಂದು ಮಾಹಿತಿ ನೀಡಲು ಕೇಳಿಕೊಂಡಿದ್ದೆ. ಯಾವ ವರ್ಷದಲ್ಲಿ ಖಾತೆ ಮಾಡಲಾಗಿತ್ತು ಮತ್ತು ಯಾರ ಹೆಸರಿನಲ್ಲಿ ಪ್ರಥಮವಾಗಿ ಖಾತೆ ಆಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ವಿವಾದಿತ ಸ್ವತ್ತು ಆರೋಪಿಗೂ ಮೊದಲು ಜಂಬನಹಳ್ಳಿ ಪರಶುರಾಮ ಮತ್ತು ಅದಕ್ಕೂ ಮೊದಲು ವೆಂಕಟೇಶ ರವರ ಹೆಸರಿನಲ್ಲಿತ್ತು ಅಂದರೆ ಸರಿ. ಆರೋಪಿ ಪರಶುರಾಮರವರಿಂದ ಸ್ವತ್ತನ್ನು ಖರೀದಿಸಿ ಪಿರ್ಯಾದುದಾರರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿ. ಆರೋಪಿ ದಾಖಲೆಗಳನ್ನು ಸೃಷ್ಟಿಸಿ ಸ್ವತ್ತು ಮಾರಾಟ ಮಾಡಿಲ್ಲ ಅಂದರೆ ಸರಿ. ನಗರಾಭಿವೃದ್ಧಿ ಪ್ರಾಧಿಕಾರದವರೇ ಆರೋಪಿಗಿಂತಲೂ ಮೊದಲಿಗೆ ಇದ್ದ ಮಾಲೀಕರಿಗೆ ಜಾಗವನ್ನು ಮಂಜೂರು ಮಾಡಿ, ಈಗ ಸದರಿ ಸ್ವತ್ತು ನಮಗೆ ಸಂಬಂಧಿಸಿದ್ದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.